# ಗಾಂಧಿನಗರ ಪೋಸ್ಟ್



## ಲಾಂಗ್ ಬದಲಿಗೆ ಪೆನ್ನು!

'ಟಗರು' ಸಿನಿಮಾ ಶತದಿನ ಪ್ರದರ್ಶನ ಕಂಡ ಬೆನ್ನಿಗೇ ಶಿವರಾಜ್‌ಕುಮಾರ್ ಅವರ ಹೊಸ ಚಿತ್ರದ ಪ್ರಕಟಣೆ ಹೊರಬಿದ್ದಿದೆ. 'ದ್ರೋಣ' ಹೆಸರಿನ ಈ ಚಿತ್ರದ ಫೋಟೊಶೂಟ್ ವಿಭಿನ್ನವಾಗಿ ನಡೆದಿದ್ದು, ಶಿವರಾಜ್‌ಕುಮಾರ್ ಪಾತ್ರದ ಬಗ್ಗೆ ಫೋಟೊಗಳು ಕುತೂಹಲ ಕೆರಳಿಸುವಂತಿವೆ. ಲಾಂಗ್ ಬದಲು ಶಿವಣ್ಣ ಪೆನ್ ಹಿಡಿದಿರುವುದು ಫೋಟೊಗಳಲ್ಲಿನ ವಿಶೇಷ.

ಪ್ರಮೋದ್ ಚಕ್ರವರ್ತಿ 'ದ್ರೋಣ' ಚಿತ್ರದ ನಿರ್ದೇಶಕರು. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಕೂಡ ಅವರದ್ದೇ. ಈ ಮುನ್ನ ಚಿತ್ರದ ಶೀರ್ಷಿಕೆಯನ್ನು 'ಹರಿಹರ' ಎಂದು ಕರೆಯಲಾಗಿದ್ದು, ಈಗ 'ದ್ರೋಣ' ಎಂದು ಬದಲಿಸಲಾಗಿದೆ. ಇದೊಂದು ಅಪ್ಪಟ ಕಮರ್ಷಿಯಲ್ ಚಿತ್ರವಾಗಿದ್ದು, ಶಿವಣ್ಣನ ಅಭಿಮಾನಿಗಳ ಪಾಲಿಗೆ ಹಬ್ಬವಾಗಿ ಪರಿಣಮಿಸಲಿದೆ ಎನ್ನುವ ವಿಶ್ವಾಸ ನಿರ್ದೇಶಕರದು.

ಶಿವರಾಜ್‌ಕುಮಾರ್ ಅವರ 'ಕಿಲ್ಲಿಂಗ್ ವೀರಪ್ಪನ್' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ, ಕಾಫಿ ಮಗ್‌ನೊಂದಿಗೆ ಅವರು ಕಾಣಿಸಿಕೊಂಡಿದ್ದ ಚಿತ್ರ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿತ್ತು. ಅನೇಕ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಸ್ಟೈಲ್ ಅಭಿನಯಿಸಿ ಫೋಟೊ ತೆಗೆಸಿಕೊಂಡಿದ್ದರು. ಅಂತಹುದೇ ಕ್ರೇಜ್ 'ದ್ರೋಣ' ಚಿತ್ರದ ಫೋಟೊಗಳಿಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಕಾಣಿಸಿಕೊಂಡಿದೆ.

ಇನಿಯಾ ಎನ್ನುವ ಮಲಯಾಳಿ ಹುಡುಗಿ ಚಿತ್ರದ ನಾಯಕಿ. ಸ್ವಾತಿ ಶರ್ಮ, ರಂಗಾಯಣ ರಘು, ಸಾಧು ಕೋಕಿಲ, ಬಾಬು ಹಿರಣ್ಣಯ್ಯ, ರೇಖಾದಾಸ್ ಸೇರಿದಂತೆ ಹಲವು ಖ್ಯಾತನಾಮರು ತಾರಾಗಣದಲ್ಲಿದ್ದಾರೆ. ರಾಮಕೃಷ್ಣ ಸಂಗೀತ ಸಂಯೋಜನೆ ಹಾಗೂ ಜಗದೀಶ್ ವಾಲಿ ಛಾಯಾಗ್ರಹಣದ, ಈ ಚಿತ್ರದ ಶೂಟಿಂಗ್ ಜೂನ್ ಕೊನೆಯ ಭಾಗದಲ್ಲಿ ಆರಂಭವಾಗಲಿದೆ.

## ಹಾರರ್ ಚಿತ್ರದಲ್ಲಿ ಶುಭಾ

'ಕೆಲವು ದಿನಗಳ ನಂತರ' ಶುಭಾ ಪೂಂಜ ನಟನೆಯ ಹೊಸ ಚಿತ್ರದ ಹೆಸರು. ಇತ್ತೀಚಿನ ದಿನಗಳಲ್ಲಿ ಶುಭಾ ಹೆಚ್ಚು ಚಿತ್ರಗಳಲ್ಲಿ ನಟಿಸುತ್ತಿಲ್ಲವಾದ ಕಾರಣ, 'ಕೆಲವು ದಿನಗಳ ನಂತರ' ಎನ್ನುವುದು ಅವರ ವೃತ್ತಿಜೀವನಕ್ಕೂ ಹೊಂದುವ ವಿಶೇಷಣ. ಇದು ಶ್ರೀನಿ ಅವರ ಚೊಚ್ಚಿಲ ನಿರ್ದೇಶನದ ಸಿನಿಮಾ. ಹಲವು ನಿರ್ದೇಶಕರ ಗರಡಿಯಲ್ಲಿ ಕೆಲಸ ಮಾಡಿದ ಅನುಭವ ಇರುವ ಅವರು, ಈಗ ಸ್ವತಂತ್ರ ನಿರ್ದೇಶಕರಾಗಿ ಗುರ್ತಿಸಿಕೊಳ್ಳುತ್ತಿದ್ದಾರೆ.

ಐವರು ಟೆಕ್ಕಿಗಳು ಗೆಳತಿಯ ಮದುವೆಯ ವಾರ್ಷಿಕೋತ್ಸವಕ್ಕೆ ಹೋಗುವಾಗ ದಾರಿಯಲ್ಲಿ ಸಂಭವಿಸುವ ಅನಿರೀಕ್ಷಿತ ಘಟನೆಗಳು ಚಿತ್ರದ ಕಥಾವಸ್ತು. ಒಂದು ರಾತ್ರಿಯ ಅವಧಿಯಲ್ಲಿ ನಡೆಯುವ ಕಥೆ ಪ್ರೇಕ್ಷಕರನ್ನು ರೋಮಾಂಚನಗೊಳಿಸುವಂತೆ ಇದೆಯಂತೆ. ಹೊಸ ತಲೆಮಾರು ತಿಳಿದೋ ತಿಳಿಯದೆಯೋ ತಪ್ಪು ಮಾಡುತ್ತಿರುತ್ತದೆ. ಇದರಿಂದ ಉಂಟಾಗುವ ಅಪಾಯಗಳ ಕುರಿತು ಸಿನಿಮಾದ ಮೂಲಕ ಪ್ರೇಕ್ಷಕರ ಗಮನಸೆಳೆಯುವುದು ನಿರ್ದೇಶಕರ ಉದ್ದೇಶ. ಹಾರರ್ ಅಂಶಗಳ ಜೊತೆಗೆ ಹಾಸ್ಯ ಕೂಡ ಚಿತ್ರಕಥೆಯಲ್ಲಿ ಇದೆಯಂತೆ.

ಶುಭಾಗೆ ಜೋಡಿಯಾಗಿ ಜಗದೀಶ್ ನಾಯಕನಾಗಿ ನಟಿಸಿದ್ದಾರೆ. ಸೋನು ಪಾಟೀಲ್, ಲೋಕೇಶ್, ಕಾವ್ಯಾ ಶೆಟ್ಟಿ ತಾರಾಗಣದಲ್ಲಿರುವ ಕೆಲವರು. ಆರು ತಿಂಗಳ ಮಗುವಿಗೆ ಕೂಡ ಚಿತ್ರದಲ್ಲಿ ಪ್ರಮುಖ ಪಾತ್ರವಿದೆಯಂತೆ. ಈ ಪಾತ್ರವನ್ನು ಗ್ರಾಫಿಕ್ಸ್ ಮೂಲಕ ರೂಪಿಸಲಾಗಿದೆ.

ಇತ್ತೀಚೆಗೆ ನಡೆದ ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಬಿಡುಗಡೆ ಸಂದರ್ಭದಲ್ಲಿ, ಚಿತ್ರತಂಡದ ಸದಸ್ಯರು ನೇತ್ರದಾನ ಮಾಡುವ ಸಂಕಲ್ಪ ತೊಟ್ಟಿದ್ದಾರೆ. 'ವರನಟ ರಾಜ್‌ಕುಮಾರ್ ಹೆಸರಿನಲ್ಲಿ ನಾವೆಲ್ಲ ನಮ್ಮ ಕಣ್ಣುಗಳನ್ನು ದಾನ ಮಾಡುತ್ತಿದ್ದೇವೆ' ಎಂದು ಶ್ರೀನಿ ಹೆಮ್ಮೆಯಿಂದ ಹೇಳುತ್ತಾರೆ.

